171(382): ಶ್ರೀ ರಾಜೇಂದ್ರ ವರ್ಮಾ (ಹುಲಸೂರು)

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹುಲಸುರು ಮತ ಕ್ಷೇತ್ರದಲ್ಲಿರುವ ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು? ಅವುಗಳು ಯಾವ ಯಾವ ಗ್ರಾಮದಲ್ಲಿವೆ?

ಆ) ಈ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು? ಈ ಪೈಕಿ ಈಗ ಇರುವ ವೈದ್ಯರ ಸಂಖ್ಯೆ ಎಷ್ಟು? ಖಾಲಿ ಇರುವ ವೈದ್ಯರ ಸಂಖ್ಯೆ ಎಷ್ಟು? ಎಷ್ಟು ದಿನದಿಂದ ಈ ಹುದ್ದೆಗಳು ಖಾಲಿ ಇವೆ.

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಈ) ಪ್ರಸಕ್ತ ಸಾಲಿನಲ್ಲಿ ಈ ಕ್ಷೇತ್ರದ ಯಾವ ಸ್ಥಳಗಳಲ್ಲಿ ಆಸ್ಪತ್ರೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ?

ಶ್ರೀ ಆರ್ ಅಶೋಕ್:

ಅ) ಹುಲಸುರು ಮತಕ್ಷೇತ್ರದಲ್ಲಿ ಒಟ್ಟು 6 ಸರ್ಕಾರಿ ಆಸ್ಪತ್ರೆಗಳಿವೆ. ಅವುಗಳೆಂದರೆ

1. ಹುಲಸೂರು, 2. ಹಳ್ಳಿಖೇಡ, 3. ದುಬಲಗುಂದಿ

4. ಘಾಟಬೋರಾಳ, 5. ಖಟಕ ಚಿಂಚೋಳಿ, 6. ವರವಟ್ಟಿ.ಬಿ.

ಆ) ಈ ಆಸ್ಪತ್ರೆಗಳಿಗೆ ಮಂಜೂರಾಗಿರುವ ವೈದ್ಯರ ಹುದ್ದೆಗಳ ಸಂಖ್ಯೆ 15, ಈ ಪೈಕಿ ಈಗ ಕಾರ್ಯ ನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ 14, ಖಾಲಿ ಇರುವ ವೈದ್ಯರ ಹುದ್ದೆಯ ಸಂಖ್ಯೆ 1, ದಿನಾಂಕ 07–07–2006 ರಿಂದ ದುಬಲಗುಂಡಿಯಲ್ಲಿ ವೈದ್ಯರ ಹುದ್ದೆ ಖಾಲಿ ಇದೆ.

ಇ) ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಹೆಚ್ಚುವರಿಯಾಗಿ ದುಬಲಗುಂಡಿಗೆ ಒಂದು ಆಯುಷ್ ವೈದ್ಯರನ್ನು ಹಾಗೂ ಆರ್.ಸಿ.ಹೆಚ್ ಅಡಿಯಲ್ಲಿ ಒಬ್ಬ ವೈದ್ಯಾದಿಕಾರಿಯನ್ನು ನೇಮಕ ಮಾಡಲಾಗಿದೆ.

ಈ) ಜನಸಂಖ್ಯೆ ಅನುಗುಣವಾಗಿ ಹಾಗೂ ಮಾರ್ಗ ಸೂಚಿ ಪ್ರಕಾರ ಪ್ರಸಕ್ತ ಸಾಲಿನಲ್ಲಿ ಹೊಸ ಸರ್ಕಾರಿ ಆಸ್ಪತ್ರೆಯನ್ನು ಈ ಕ್ಷೇತ್ರದಲ್ಲಿ ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

172(242) ರಾಮಲಿಂಗಾರೆಡ್ಡಿ (ಜಯನಗರ)

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಶಲಯದ ಹೊಸ ಕ್ಯಾಂಪಸ್‌ಅನ್ನು ರಾಮನಗರ ಬಳಿ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಈಗಿರುವ ಸ್ಥಳದಿಂದ ಯಾವಾಗ ಹೊಸ ಕ್ಯಾಂಪಸ್‌ಗೆ ಈ ವಿಶ್ವ ವಿದ್ಯಾಲಯವನ್ನು ಸ್ಥಳಾಂತರಿಸಲಾಗುವುದು?

ಶ್ರೀ ವಿ.ಎಸ್.ಆಚಾರ್ಯ:

ಅ) ಹೌದು

ಆ) ಕಟ್ಟಡ ಪೂರ್ಣ ಪ್ರಮಾಣದಲ್ಲಿ ಮುಕ್ತಾಯಗೊಂಡ ನಂತರ ವಿಶ್ವ ವಿದ್ಯಾಲಯವನ್ನು ಸ್ಥಳಾಂತರಿಸಲಾಗುವುದು.